ಸಂಕಲನಾತ್ಮಕ ಮೌಲ್ಯಮಾಪನ – ೦೧ ಸೆಪ್ಟೆಂಬರ್ - ೨೦೧೯

.                                    ವಿಷಯ :- ಪ್ರಥಮ ಭಾಷೆ ಕನ್ನಡ

ತರಗತಿ :- ೧೦ನೇ.          ಪ್ರಶ್ನೆ ಪತ್ರಿಕೆ          ಗರಿಷ್ಠ ಅಂಕಗಳು :- ೧೦೦

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾ ಕ್ಷರದೊಂದಿಗೆ ಬರೆಯಿರಿ.          ೬ x ೧ =೬

೦೧ ವಧೂಪೇತ ಪದವು ಈ ಸಂದಿಗೆ ಉದಾಹರಣೆಯಾಗಿದೆ

ಎ . ಗುಣಸಂಧಿ     ಬಿ. ಯಣ್ ಸಂಧಿ     ಸಿ. ವೃದ್ಧಿ ಸಂಧಿ     ಡಿ .ಸವರ್ಣ ದೀರ್ಘ ಸಂಧಿ

೦೨. ಒಂದು ಪದವನ್ನೊ ವಾಕ್ಯವನ್ನೊ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೊ ವಾಕ್ಯವನ್ನೊ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ .

ಎ. ಭಾವಸೂಚಕ     ಬಿ. ವಿವರಣ     ಸಿ. ಆವರಣ     ಡಿ. ಉದ್ಧರಣ

೦೩. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯ ಇದು .

ಎ. ಮಿಶ್ರ ವಾಕ್ಯ     ಬಿ. ಸಾಮಾನ್ಯ ವಾಕ್ಯ     ಸಿ. ಸಂಯೋಜಿತ ವಾಕ್ಯ     ಡಿ. ಸಂಭವ ನಾರ್ಥಕ ವಾಕ್ಯ

೦೪.ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅ ವ್ಯಯವನ್ನು ಬಳಸಲಾಗುತ್ತದೆ .

ಎ. ಅನುಕರಣಾ ವ್ಯಯ     ಬಿ. ಕ್ರಿಯಾರ್ಥಕಾವ್ಯಯ     ಸಿ. ಸಂಬಂಧಾರ್ಥ ಕಾವ್ಯ     ಡಿ. ಅವಧಾರಣಾ ರ್ಥಕಾ ವ್ಯಯ

೦೫. ಸ್ಯಾನಿಟರಿ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.

ಎ. ಹಿಂದೂಸ್ತಾನಿ     ಬಿ. ಇಂಗ್ಲಿಷ್     ಸಿ. ಗ್ರೀಕ್     ಡಿ. ಪೋರ್ಚುಗೀಸ್

೦೬. ಚತುರ್ಥೀ ವಿಭಕ್ತಿ ಪ್ರತ್ಯಯದ ಕಾರಕಾರ್ಥ .

ಎ. ಅಪದಾನ     ಬಿ.ಸಂಬಂಧ     ಸಿ.ಸಂಪ್ರದಾನ     ಡಿ.ಅಧಿಕರಣ.

II. ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೇ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ .     ೪ x ೧ = ೪

೦೭.ಸತಿ ಪತಿ : ಜೋಡು ನುಡಿ :: ಮೊಟ್ಟ ಮೊದಲು : -------------

೦೮ ತವಸಿ : ತಪಸ್ವಿ ::. ಕುಠಾರ : ------------

೦೯. ಹಣತೆ : ದೀಪ :: ಹರಿಕಾರ : ------------

೧೦. ಮಾಡಳು : ನಿಷೇಧಾರ್ಥಕ :: ಮಾಡಿಯಾಳು : ------------

III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.     ೭ x ೧ = ೭

೧೧. ರಾಹೀಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು ?

೧೨. ಮುದುಕಿಯ ಸೊಸೆಯು ಯಾವ ಬೇನೆಯಿಂದ ನರಳುತ್ತಿದ್ದಳು ?

೧೩. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು ?

೧೪. ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ ವಿಶ್ವೇಶ್ವರಯ್ಯ ಮಾಡಿದ ಘೋಷಣೆ ಏನು ?

೧೫. ಕಲುಷಿತವಾಗಿರುವುದು ಏನೇನು ?

೧೬. ದ.ರಾ .ಬೇಂದ್ರೆಯವರು ಕಾಲವನ್ನು ಯಾವುದಕ್ಕೆ ಹೋಲಿಸಿದ್ದಾರೆ ?

೧೭. ವಿವೇಕಾನಂದ ಅವರು ಯಾವ ವರ್ಗದವರು ತನ್ನ ಊಳಿಗ ಸ್ವಭಾವವನ್ನು ಬಿಟ್ಟು ಹೊರ ಬರಬೇಕೆಂದು ಕರೆ ಕೊಡುತ್ತಾರೆ ?

ಪು.ತಿ. ನೋ

Use E-Papers, Save Trees
Above line hide when print out- InyaTrust.com

IV . ಈ ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯದಲ್ಲಿ ಉತ್ತರಿಸಿ . ೧೦ x ೨ = ೨೦

೧೮.ಮಹಿಳೆಯ ಅರ್ತನಾದ ಕೇಳಿ ರಾಹಿಲನು ಮನದಲ್ಲಿ ಏನೆಂದು ಕೊಂಡನು ?

೧೯. ಶಬರಿಯು ರಾಮನ ಗುಣಗಾನವನ್ನು ಹೇಗೆ ಮಾಡುತ್ತಾಳೆ ?

೨೦. ಸ್ಟೋನ್ ಆಫ್ ಸ್ಕೋನ್ ಇದರ ವಿಶೇಷತೆಯನ್ನು ತಿಳಿಸಿ .

೨೧.ನೆಹರು ಅವರು ಸರ್ ಎಂ ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ ?

೨೨.ಲಾವಣಿಗಳನ್ನು ಏಕೆ ವೀರ ಗೀತೆಗಳು ಎನ್ನಲಾಗಿದೆ ?

೨೩. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ?

೨೪. ವಿವೇಕಾನಂದರು ಏಕೆ ಧಾರ್ಮಿಕ ಮೂಲಭೂತವಾದಕ್ಕೆ ಉಗ್ರ ವಿರೋಧಿಯಾಗಿದ್ದರು ?

೨೫.ವಿವೇಕಾನಂದರು ಇಂದಿಗೂ ಸತ್ಯ ಹೇಗೆ ?

೨೬. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?

೨೭. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ? ಹಾಗೂ ವಸಂತ ಯಾರಿಗೆ ಮುಖ ತೋರಲಿಲ್ಲ.?

V .ಈ ಕೆಳಗಿನ ಸಾಹಿತಿ / ಕವಿಗಳ ಜನ್ಮಸ್ಥಳ ,ಕಾಲ ,ಕೃತಿ ,ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ . ೨ x ೩ =೬

೨೮. ಪು .ತಿ .ನರಸಿಂಹಾಚಾರ್

೨೯. ದ .ರಾ. ಬೇಂದ್ರೆ

VI. ಈ ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. ೧ x ೩ = ೩

೩೦ . ಕೊರಳ ಸೆರೆ ಹಿಗ್ಗಿದವು ದೃಗುಜಲ

ಉರವಣಿಸಿ ಕಡು ನೊಂದನ ಕಟಾ

ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ

VII. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರ ಹೆಸರಿಸಿ ,ಲಕ್ಷಣ ಬರೆದು ಸಮನ್ವಯಗೊಳಿಸಿ . ೧ x ೩ = ೩

೩೧. ಒಳಗಿನ ಮಂದಿ ಗುಂಡು ಹೊಡೆದರು ಮುಂಗಾರಿ ಸಿಡಿಲ ಸಿಡಿದಾಂಗ

VIII. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವ ದೊಂದಿಗೆ ವಿಸ್ತರಿಸಿ ಬರೆಯಿರಿ . ೧ x ೩ = ೩

೩೨. ತಾಳಿದವನು ಬಾಳಿಯಾನು

. ಅಥವಾ

ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ .

IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ. ೬ x ೩ = ೧೮

೩೩." ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ.! "

೩೪ . " ಬೆಳಕಿಗೋಲಿದವರ್ ಉರಿವ ಬತ್ತಿಯ ಕರುಕ ಕಾಣರು."

೩೫." ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮುಟ್ಟಿದ್ದೇ."

೩೬. " ಮುಂಗಾರಿನ ಮಳೆಯಾಗೋಣ. "

೩೭. " ಮೋಸ ಮಾಡಿ ನಮ್ಮದೇಶ ಗೆದಿತಾರೊ ಮುಂದ ನಮಗ ಘೋರಾ. "

೩೮ . " ರವಿಸುತ ಕಿವಿಯಲಿ ಬಿತ್ತಿದನು ಭಯವ ." ಪು.ತಿ.ನೋ.

.

**Use E-Papers, Save Trees**
Above line hide when print out- InyaTrust.com

X . ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ. ೧ x ೪ = ೪

೩೯. ನೀಲ ಮೇಘ ಮಂಡಲ -----------------------

----------------------------------------------------
---------------------------------------------------
----------------------------------------------------

ಹಕ್ಕಿ ಹಾರುತಿದೆ ನೋಡಿದಿರಾ ?

. ಅಥವಾ

ಯುಗ ಯುಗಗಳ ----------------------------------

----------------------------------------------------
-----------------------------------------------------
------------------------------------ -----------------

ಹಕ್ಕಿ ಹಾರುತಿದೆ ನೋಡಿದಿರಾ ?

XI. ಈ ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥ ಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾ ಧರಿಸಿ ಸಾರಾಂಶವನ್ನು ಬರೆಯಿರಿ . ೧ x ೪ = ೪

೪೦.ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ .

XII .ಈ ಕೆಳಗಿನ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ . ೨ x ೪ = ೮

೪೧. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ' ಮಾದರಿ ಮೈಸೂರು ರಾಜ್ಯ ' ಹೇಗಾಯಿತು ? .

. ಅಥವಾ

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ .

೪೨. ಶ್ರೀಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಕುರಿತು ಬರೆಯಿರಿ. . .

. ಅಥವಾ

ಪಾಂಡವರು ಸಹೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ .

XIII. ಈ ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ . ೧ x ೪ = ೪ ( ೨ + ೨ )

೪೩. ಭಾರತೀಯ ಕ್ರಿಕೆಟ್ ನ ಯಶಸ್ಸಿನ ಹಿಂದೆ ನೂರಾರು ಖ್ಯಾತ ನಾಮರ ದ್ದಾರೆ . ಅವರಲ್ಲಿ ಕರ್ನಾಟಕದ ರಾಹುಲ್ ದ್ರಾವಿಡ್ ಸಹ ಒಬ್ಬರು . ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಮಾತು ರಾಹುಲ್ ದ್ರಾವಿಡ್ ಅವರಿಗೆ ಸೊಗಸಾಗಿ ಅನ್ವಯವಾಗುತ್ತದೆ . ಅವರು ಬಾಲ್ಯದಲ್ಲಿಯೇ ಕ್ರಿಕೆಟ್ ಆಟದಲ್ಲಿ ಆಸಕ್ತಿ ಹೊಂದಿ ಸತತ ಅಭ್ಯಾಸ ಮಾಡುತ್ತಿದ್ದರು. ಅದರ ಫಲವಾಗಿ ತಮ್ಮ ಹನ್ನೆರಡನೇ ವಯಸ್ಸಿನಲ್ಲಿಯೇ ಸಾಲ ತಂಡವನ್ನು ಪ್ರತಿನಿಧಿಸುವಂತಾಯಿತು. ಆಡಿದ ಮೊದಲ ಪಂದ್ಯದಲ್ಲಿಯೇ ಶತಕವನ್ನು ಬಾರಿಸಿದರು . ಒಂದು ಉತ್ತಮವಾದ ಎಸೆತವು ಪ್ರಸಿದ್ಧ ಆಟಗಾರನಾದರೂ ಔಟು ಮಾಡಬಹುದು ಆದರೆ ರಾಹುಲ್ ದ್ರಾವಿಡ್ ಅವರದ್ದು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ ವಿಕೆಟನ್ನು ಒಪ್ಪಿಸದಿರುವ ಸದಾವಕಾಶ ಕ್ಕಾಗಿ ರನ್ ಗಳಿಸುವ ಅದ್ವಿತೀಯ ಬ್ಯಾಟಿಂಗ್ ಶೈಲಿ. ದಿನವಿಡೀ ಕ್ರೀಸ್ ನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಅವರದ್ದು . ಅದೇ ಅವರನ್ನು ಗೋಡೆ ಎಂಬ ಅನ್ವರ್ಥನಾಮದಿಂದ ಪ್ರಸಿದ್ಧ ರನ್ನಾಗಿಸಿತು . ಬೌಂಡರಿ ಅಥವಾ ಔಟಾಗು ಎಂಬ

Use E-Papers, Save Trees
Above line hide when print out- InyaTrust.com

ಮನೋಭಾವದ ಆಟಗಾರರಿಗಿಂತ ಭಿನ್ನವಾದ ಶೈಲಿ ರಾಹುಲ್ ಅವರದು ಸಂಯಮದ ಹೊಡೆತ ಉತ್ತಮ ಎಸೆತವನ್ನು ಗೌರವಿಸುವುದು, ಕೆಟ್ಟ ಎಸೆತವನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವುದು , ಎಲ್ಲ ಬಗೆಯ ಹೊಡೆತಗಳಲ್ಲಿ ಶಿಸ್ತು ಕಲಾತ್ಮಕತೆ ಎಲ್ಲವೂ ನಯನ ಮನೋಹರ . ಇವು ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯವಾಗಿತ್ತು . ರಾಹುಲ್ ದ್ರಾವಿಡ್ ಅವರು ಎಂದು ಸ್ವಂತ ದಾಖಲೆಗಾಗಿ ಆಡಿದವರಲ್ಲ ; ತಂಡದ ಗೆಲುವಿಗಾಗಿ; ದೇಶದ ಗೌರವಕ್ಕಾಗಿ ಆಡಿದವರು.

. ಪ್ರಶ್ನೆಗಳು

ಳ೩. ಅ .ರಾಹುಲ್ ದ್ರಾವಿಡ್ ಅವರನ್ನು ಗೋಡೆ ಎಂದು ಕರೆಯಲು ಕಾರಣವೇನು.?

ಳ೩. ಆ. ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯವೇನು.?

XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. ೧ x ೫ = ೫

ಳಳ. ನಿಮ್ಮನ್ನು ಸರಗೂರಿನ ಕಾವೇರಿ ಪ್ರೌಢಶಾಲೆಯ ಪ್ರಕೃತಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯವಾಣಿ ದಿನಪತ್ರಿಕೆಯ ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ .

ಅಥವಾ

ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ಅಶೋಕ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭದ ವಿವರವನ್ನು ತಿಳಿಸಿ ಮೈಸೂರಿನಲ್ಲಿರುವ ಜಯಲಕ್ಷ್ಮಿ ಎಂಬ ಹೆಸರಿನ ತಾಯಿಯವರಿಗೊಂದು ಪತ್ರ ಬರೆಯಿರಿ.

XV.ಈ ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ

. ೧ x ೫ = ೫

ಳ೫. ಅ. ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು

ಅಥವಾ

. ಆ. ಸ್ವಚ್ಛಭಾರತ ಅಭಿಯಾನ

. ***********************************

**Use E-Papers, Save Trees**
**Above line hide when print out- InyaTrust.com**